ಕರ್ನಾಟಕ ಸರ್ಕಾರ

# ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/31/ಅಉಆ/2018-19/ನೇವಿ-1

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 03.07.2018.

## ಸುತ್ತೋಲೆ

ವಿಷಯ: 2018-19ನೇ ಶೈಕ್ಷಣಿಕ ಸಾಲಿಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಹೆಚ್ಚುವರಿ ಬೋಧನಾ ಕಾರ್ಯಭಾರಕ್ಕೆ ಅತಿಥಿ ಉಪನ್ಯಾಸಕರುಗಳನ್ನು ಆಯ್ಕೆ ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ:ಇಡಿ/139/ಡಿಸಿಇ/2018, ದಿನಾಂಕ:02.07.2018.

* * * * * * *

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಯಂ ಉಪನ್ಯಾಸಕರಿಗೆ ಕಾರ್ಯಭಾರ ಹಂಚಿಕೆ ಮಾಡಿ, ಉಳಿಕೆಯಾಗುವ ಹೆಚ್ಚುವರಿ ಬೋಧನಾ ಕಾರ್ಯಭಾರವನ್ನು ನಿರ್ವಹಿಸಲು ಪ್ರತಿ ವರ್ಷ ತಾತ್ಕಾಲಿಕವಾಗಿ ಅತಿಥಿ ಉಪನ್ಯಾಸಕರ ಸೇವೆಯನ್ನು ಬಳಸಿಕೊಳ್ಳಲಾಗುತ್ತಿದ್ದು, ಪ್ರಸ್ತುತ 2018-19 ನೇ ಸಾಲಿನಲ್ಲಿಯೂ ಸಹ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅತಿಥಿ ಉಪನ್ಯಾಸಕರುಗಳನ್ನು ಆಯ್ಕೆಮಾಡಿಕೊಳ್ಳಲು ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ಅನುಮತಿ ನೀಡಲಾಗಿದೆ. ಅದರಂತೆ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ ಪಾರದರ್ಶಕವಾಗಿ ಆಯ್ಕೆ ಮಾಡಿಕೊಳ್ಳುವುದು.

ಅತಿಥಿ ಉಪನ್ಯಾಸಕರನ್ನು ಆಯ್ಕೆಮಾಡಿಕೊಳ್ಳುವ ಪೂರ್ವದಲ್ಲಿ ಪ್ರಾಂಶುಪಾಲರುಗಳು ಈ ಕೆಳಕಂಡ ಅಂಶಗಳನ್ನು ಪರಿಶೀಲಿಸಬೇಕಾಗಿರುತ್ತದೆ.

- ಎಲ್ಲಾ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕಲಾ ಮತ್ತು ವಾಣಿಜ್ಯ ವಿಷಯಗಳನ್ನು ಬೋಧಿಸುವ ಅಧ್ಯಾಪಕರು ವಾರಕ್ಕೆ 16 ಗಂಟೆ ಹಾಗೂ ಪ್ರಾಯೋಗಿಕ ತರಗತಿಗಳನ್ನು ಹೊಂದಿರುವ ವಿಜ್ಞಾನ ಮತ್ತು ಇತರ ವಿಷಯಗಳನ್ನು ಬೋಧಿಸುವ ಅಧ್ಯಾಪಕರು ವಾರಕ್ಕೆ 20 ಗಂಟೆ ಬೋಧನಾ ಕಾರ್ಯವನ್ನು ಕಡ್ಡಾಯವಾಗಿ ನಿರ್ವಹಿಸಬೇಕಾಗಿರುತ್ತದೆ. ಆನಂತರವೂ ಬೋಧನಾ ಕಾರ್ಯಭಾರ ಉಳಿಕೆ ಇದ್ದಲ್ಲಿ ಅತಿಥಿ ಉಪನ್ಯಾಸಕರುಗಳನ್ನು ಅಗತ್ಯಕ್ಕನುಗುಣವಾಗಿ ಆನ್‌ಲೈನ್ ಮೂಲಕ ಆಯ್ಕೆ ಮಾಡಿಕೊಳ್ಳುವುದು.

- ಬಿ.ಎ, ಬಿ.ಕಾಂ, ಹಾಗೂ ಬಿ.ಬಿ.ಎಂ/ಬಿ.ಬಿ.ಎ. ವಿಷಯಗಳನ್ನು ಬೋಧಿಸುವ ಅತಿಥಿ ಉಪನ್ಯಾಸಕರು, ವಾರಕ್ಕೆ ಕನಿಷ್ಠ 4 ಗಂಟೆಯಿಂದ ಗರಿಷ್ಠ 8 ಗಂಟೆ ಹಾಗೂ ಪ್ರಾಯೋಗಿಕ ತರಗತಿಗಳನ್ನು ಹೊಂದಿರುವ ವಿಷಯವನ್ನು ಬೋಧಿಸುವ ಅತಿಥಿ ಉಪನ್ಯಾಸಕರು ವಾರಕ್ಕೆ ಕನಿಷ್ಠ 5 ಗಂಟೆಯಿಂದ ಗರಿಷ್ಠ 10 ಗಂಟೆ ಬೋಧನಾ ಕಾರ್ಯವನ್ನು ನಿರ್ವಹಿಸುವುದು.

- ಪ್ರತಿ ಕೋರ್ಸನಲ್ಲಿ ಹಾಗೂ ಐಚ್ಚಿಕ ಸಮೂಹ ವಿಷಯಗಳಲ್ಲಿ ಕನಿಷ್ಠ 15 ವಿದ್ಯಾರ್ಥಿಗಳಿಗಿಂತ ಕಡಿಮೆ ಪ್ರವೇಶಾತಿ ಆದಲ್ಲಿ ಅಂತಹ ಕೋರ್ಸಗಳಿಗೆ/ಐಚ್ಚಿಕ ಸಮೂಹಕ್ಕೆ ವಿದ್ಯಾರ್ಥಿಗಳ ಪ್ರವೇಶಾತಿ ಮಾಡಿಕೊಳ್ಳದಂತೆ ಹಾಗೂ ಅಂತಹ ಕೋರ್ಸ/ಕಾಂಬಿನೇಷನ್‌ಗಳನ್ನು ಪ್ರಾರಂಭಿಸದಿರುವಂತೆ/ ಮುಂದುವರೆಸದಿರುವಂತೆ ಪ್ರಾಂಶುಪಾಲರು ಕಟ್ಟು ನಿಟ್ಟಿನ ಕ್ರಮವಹಿಸತಕ್ಕದ್ದು. ಈ ಬಗ್ಗೆ ಪ್ರವೇಶಾತಿ ಸಮಯದಲ್ಲೇ ವಿದ್ಯಾರ್ಥಿಗಳಿಗೆ ತಿಳುವಳಿಕೆ ನೀಡಿ ಅವರಿಂದ ಮುಚ್ಚಳಿಕೆ ಪತ್ರ ಪಡೆಯಬೇಕಾಗಿರುತ್ತದೆ.

- ಬಿ.ಎ, ಬಿಕಾಂ, ಹಾಗೂ ಬಿ.ಬಿ.ಎಂ, ಭಾಷಾ ಹಾಗೂ ಐಚ್ಚಿಕ ವಿಷಯಗಳ ತರಗತಿಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ 99 ಕ್ಕಿಂತ ಅಧಿಕವಾದಾಗ ಹಾಗೂ ಬಿಎಸ್ಸಿ, ತರಗತಿಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ 66 ಕ್ಕಿಂತ ಅಧಿಕವಾದಾಗ ಮತ್ತು ಕಂಪ್ಯೂಟರ್ ಫಂಡಮೆಂಟಲ್, ಭಾರತ ಸಂವಿಧಾನ, ಮತ್ತು ಪರಿಸರ ಅಧ್ಯಯನ ತರಗತಿಗಳಲ್ಲಿ 100ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು ಇದ್ದಲ್ಲಿ ಮಾತ್ರ ಹೆಚ್ಚುವರಿ ವಿಭಾಗಗಳನ್ನು ತೆರೆಯುವುದು ಹಾಗೂ ಅದರನ್ವಯ ಕಾರ್ಯಭಾರವನ್ನು

ಗಣನೆಗೆ ತೆಗೆದುಕೊಳ್ಳುವುದು. ಕೊಠಡಿಗಳ ಸಾಮಾರ್ಥ್ಯ ಕಡಿಮೆ ಇದ್ದಲ್ಲಿ ಸೂಕ್ತ ದಾಖಲಾತಿಗಳೊಂದಿಗೆ, ಎರಡನೇ ವಿಭಾಗ ತೆರೆಯಲು ಪ್ರಾದೇಶಿಕ ಜಂಟಿ ನಿರ್ದೇಶಕರಿಂದ ಪೂರ್ವಾನುಮತಿ ಪಡೆದ ನಂತರ ಕ್ರಮವಹಿಸುವುದು.

- ಪ್ರಾಯೋಗಿಕ ತರಗತಿಗಳ ಕಾರ್ಯಭಾರವನ್ನು ಲೆಕ್ಕ ಹಾಕುವಾಗ ಪ್ರತಿ ಬ್ಯಾಚಿಗೆ ಕನಿಷ್ಠ 19(15+4) ವಿದ್ಯಾರ್ಥಿಗಳು ಇರತಕ್ಕದ್ದು ಮತ್ತು ಅಂತಹ ಒಂದು ಬ್ಯಾಚಿಗೆ ಒಬ್ಬ ಉಪನ್ಯಾಸಕರು ಮಾತ್ರ ಕಾರ್ಯ ನಿರ್ವಹಿಸತಕ್ಕದ್ದು. ವಿದ್ಯಾರ್ಥಿಗಳ ಸಂಖ್ಯೆ 19 ರಿಂದ 30ರ ವರೆಗೆ ಇದ್ದಲ್ಲಿ ಮಾತ್ರ ಆ ಬ್ಯಾಚಿಗೆ ಎರಡು ಉಪನ್ಯಾಸಕರು ಕಾರ್ಯ ನಿರ್ವಹಿಸತಕ್ಕದ್ದು. (ವಿಶ್ವ ವಿದ್ಯಾಲಯಗಳ ಅಧಿಸೂಚನೆಗಳನ್ವಯ ಬ್ಯಾಚ್‌ಗಳನ್ನು ರಚಿಸುವಾಗ ಹಾಗೂ ಅದಕ್ಕೆ ಸಂಬಂಧಿಸಿದಂತೆ ಉಪನ್ಯಾಸಕರಿಗಳಿಗೆ ಕಾರ್ಯಭಾರ ನಿಗಧಿ ಮಾಡುವಾಗಲೂ ಈ ಅಂಶವನ್ನೇ ಪರಿಗಣಿಸಬೇಕು.) ಕಾರಣಾಂತರಗಳಿಂದ 19 ವಿದ್ಯಾರ್ಥಿಗಳಿಗಿಂತಲೂ ಕಡಿಮೆ ಸಂಖ್ಯೆಯ ಬ್ಯಾಚ್‌ಗಳನ್ನು ರಚಿಸಬೇಕಾದ ಸಂದರ್ಭದಲ್ಲಿ ಸೂಕ್ತ ದಾಖಲೆಗಳನ್ನು ಒದಗಿಸಿ ಪ್ರಾದೇಶಿಕ ಜಂಟಿ ನಿರ್ದೇಶಕರಿಂದ ಪೂರ್ವಾನುಮತಿ ಪಡೆದು ನಂತರ ಕ್ರಮವಹಿಸಬೇಕಾಗಿರುತ್ತದೆ.

- ಸರ್ಕಾರಿ ಕಾಲೇಜುಗಳಲ್ಲಿ ಖಾಯಂ ಉಪನ್ಯಾಸಕರುಗಳಿಗೆ ನಿಗದಿತ ಕಾರ್ಯಭಾರ ಹಂಚಿದ ನಂತರ ಉಳಿದ ಕಾರ್ಯಭಾರವು ಕನಿಷ್ಠ 04 ಗಂಟೆ ಇದ್ದಲ್ಲಿ ಮಾತ್ರ ಸದರಿ ಕಾರ್ಯಭಾರದ ಎದುರು ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿಕೊಳ್ಳತ್ತಕ್ಕದ್ದು. ಖಾಯಂ ಉಪನ್ಯಾಸಕರು ಒಬ್ಬರೇ ಇದ್ದಾಗ ಅವರಿಗೆ ನಿಗಧಿಪಡಿಸಿರುವ ಕಾರ್ಯಭಾರದ ಜೊತೆಗೆ ಅವರೇ 03 ಗಂಟೆ ಹೆಚ್ಚುವರಿ ಕಾರ್ಯಭಾರವನ್ನು ನಿರ್ವಹಿಸತಕ್ಕದ್ದು. (ನಿರ್ವಹಿಸುವ 03 ಗಂಟೆಗಳ ಕಾರ್ಯಭಾರವನ್ನು ಸರಿದೂಗಿಸಲು ಅವರುಗಳು ಟ್ಯೂಟೇರಿಯಲ್ ಕಾರ್ಯಭಾರದಲ್ಲಿ 02 ಗಂಟೆಗಳು ಹಾಗೂ ಆಡಳಿತಾತ್ಮಕ ಕಾರ್ಯಭಾರದಲ್ಲಿ 01 ಗಂಟೆಗಳನ್ನು ವಿನಾಯಿತಿ ನೀಡಬಹುದು).

<u>ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ಈ ಕೆಳಕಂಡ ಮಾರ್ಗಸೂಚಿಗಳನ್ನು ಪ್ರಾಂಶುಪಾಲರು ಅನುಸರಿಸಬೇಕಾಗಿರುತ್ತದೆ;</u>

1. ಕಾಲೇಜಿನಲ್ಲಿ ಲಭ್ಯವಾಗುವ ಕಾರ್ಯಭಾರ ಲೆಕ್ಕ ಹಾಕಿದ ನಂತರ ಹಾಲಿ ಜಾರಿಯಲ್ಲಿರುವ ನಿಯಮಗಳನ್ವಯ ಪೂರ್ಣಕಾಲಿಕ ಉಪನ್ಯಾಸಕರಿಗಳಿಗೆ ಕಾರ್ಯಭಾರವನ್ನು ಹಂಚಿಕೆ ಮಾಡಿ, ಉಳಿಕೆಯಾಗುವ ಹೆಚ್ಚುವರಿ ಕಾರ್ಯಭಾರವನ್ನು ನಿರ್ವಹಿಸಲು ಮಾತ್ರ ಅತಿಥಿ ಉಪನ್ಯಾಸಕರ ಸೇವೆಯನ್ನು ಬಳಸಿಕೊಳ್ಳುವುದು ಹಾಗೂ ಸದರಿ ಅತಿಥಿ ಉಪನ್ಯಾಸಕರನ್ನು ಗರಿಷ್ಠ 10 ತಿಂಗಳ ಅವಧಿಗೆ ತಾತ್ಕಾಲಿಕವಾಗಿ ಮಾತ್ರ ಆಯ್ಕೆ ಮಾಡಿಕೊಳ್ಳುವುದು.

2. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಉಪನ್ಯಾಸಕರು/ಬೋಧಕರಿಗೆ ನಿಗಧಿತ ಬೋಧನಾ ಕಾರ್ಯಭಾರವಿಲ್ಲದೇ ವರ್ಗಾವಣೆ/ನಿಯೋಜನೆ ಕೋರಿ ಬಹಳಷ್ಟು ಮನವಿಗಳು ಸರ್ಕಾರ/ ಇಲಾಖೆಯಲ್ಲಿ ಸ್ವೀಕೃತವಾಗುತ್ತಿವೆ. ಆದ್ದರಿಂದ ಬಿ.ಎ., ಬಿ.ಕಾಂ. ಹಾಗೂ ಬಿ.ಬಿ.ಎಂ./ಬಿ.ಬಿ.ಎ. ಕೋರ್ಸುಗಳಲ್ಲಿ ವಾರಕ್ಕೆ 16 ಗಂಟೆಗಳು ಹಾಗೂ ವಿಜ್ಞಾನ ವಿಭಾಗದಲ್ಲಿ ವಾರಕ್ಕೆ 20 ಗಂಟೆಗಳ ನಿಗಧಿತ ಕಾರ್ಯಭಾರವಿಲ್ಲದ ಬೋಧಕರಿಗೆ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾಲೇಜಿನೊಂದಿಗೆ ಕೊರತೆ ಕಾರ್ಯಭಾರವಿರುವ ಮಿಕ್ಕುಳಿದ ಬೋಧನಾ ಕಾರ್ಯವನ್ನು ನಿರ್ವಹಿಸಲು ಇತರೆ ಕಾಲೇಜುಗಳಿಗೆ ನಿಯೋಜಿಸಲು ಪ್ರಾಂಶುಪಾಲರುಗಳು ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರಿಗೆ ಪ್ರಸ್ತಾವನೆಯನ್ನು ಸಲ್ಲಿಸುವುದು. ಅಂತಹ ಪ್ರಸ್ತಾವನೆಗಳನ್ನು ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರುಗಳು ಕಾಲೇಜುವಾರು ಕ್ರೋಢಿಕರಿಸಿ, ಸ್ಪಷ್ಟ ಅಭಿಪ್ರಾಯದೊಂದಿಗೆ ತಕ್ಷಣವೇ ಕೇಂದ್ರ ಕಛೇರಿಗೆ ವರದಿ ಸಲ್ಲಿಸುವುದು.

3. ಮುಂದುವರೆದು, ನಿಯಮಾನಸಾರ ಬಿ.ಎ., ಬಿ.ಕಾಂ/ಬಿ.ಬಿ.ಎಂ. ಬಿ.ಬಿ.ಎ. ಕೋರ್ಸುಗಳಲ್ಲಿ ವಾರಕ್ಕೆ 16 ಗಂಟೆಗಳ ಹಾಗೂ ವಿಜ್ಞಾನ ವಿಭಾಗದಲ್ಲಿ 20 ಗಂಟೆಗಳ ಬೋಧನಾ ಕಾರ್ಯಭಾರವನ್ನು ಅಧ್ಯಾಪಕರುಗಳು ಕಡ್ಡಾಯವಾಗಿ ನಿರ್ವಹಿಸುವಂತೆ ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳು ಹಾಗೂ ಪ್ರಾದೇಶಿಕ ಜಂಟಿ ನಿರ್ದೇಶಕರು ನಿಗಾ ವಹಿಸುವುದು.

4. ಆನ್‌ಲೈನ್ ಮೂಲಕ ಸಲ್ಲಿಸಿರುವ ಅಭ್ಯರ್ಥಿಗಳ ಪ್ರತಿಭಾ ಪಟ್ಟಿಯನ್ನು (Merit List) ಸಿದ್ಧಪಡಿಸುವಾಗ ಈ ಕೆಳಕಂಡ ಮಾನದಂಡಗಳನ್ವಯ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿಕೊಳ್ಳುವುದು.

| ಕ್ರಮ ಸಂಖ್ಯೆ | ವಿದ್ಯಾರ್ಹತೆ | ಗರಿಷ್ಠ ಅಂಕಗಳು |
|---|---|---|
| ಅ) | ಸಾಮಾನ್ಯ ವಿದ್ಯಾರ್ಹತೆ:<br>ಅಭ್ಯರ್ಥಿಯು ಸ್ನಾತಕೋತ್ತರ ಪದವಿಯಲ್ಲಿ ಎರಡು ವರ್ಷ ಗಳಿಸಿರುವ ಒಟ್ಟು ಶೇಕಡಾವಾರು ಅಂಕಗಳ 50% ನ್ನು ಗಣನೆಗೆ ತೆಗೆದುಕೊಳ್ಳುವುದು. (ಉದಾ: ಅಭ್ಯರ್ಥಿಯು ಸ್ನಾತಕೋತ್ತರ ಪದವಿಯಲ್ಲಿ ಶೇಕಡ 60 ಅಂಕ ಪಡೆದಿದ್ದಲ್ಲಿ ಅದರ ಅರ್ಧ ಭಾಗವನ್ನು ಅಂದರೆ 30 ಅಂಕಗಳು ಎಂಬುದಾಗಿ ಗಣನೆಗೆ ತೆಗೆದುಕೊಳ್ಳುವುದು). | **50 ಅಂಕಗಳು** |
| ಆ) | 1) ಪಿಹೆಚ್.ಡಿ ವಿದ್ಯಾರ್ಹತೆ ಪಡೆದಿದ್ದಲ್ಲಿ<br>2) ಎನ್‌ಇಟಿ/ಎಸ್‌ಎಲ್‌ಇಟಿ ವಿದ್ಯಾರ್ಹತೆ ಪಡೆದಿದ್ದಲ್ಲಿ<br>3) ಎಂ.ಫಿಲ್. ವಿದ್ಯಾರ್ಹತೆ ಪಡೆದಿದ್ದಲ್ಲಿ | **15 ಅಂಕಗಳು**<br>**12 ಅಂಕಗಳು**<br>**08 ಅಂಕಗಳು** |
| ಇ) | ಹಿಂದಿನ ವರ್ಷಗಳಲ್ಲಿ ಸರ್ಕಾರಿ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ಅವಧಿಗೆ ಪ್ರತಿ ಶೈಕ್ಷಣಿಕ ವರ್ಷಕ್ಕೆ 3 ಅಂಕಗಳಂತೆ ಗರಿಷ್ಠ 05 ವರ್ಷಗಳಿಗೆ, 15 ಅಂಕಗಳು ಮಿತಿಗೊಳಿಸುವುದು (ಪ್ರತಿ ಶೈಕ್ಷಣಿಕ ವರ್ಷದ ಪೂರ್ಣ ಅವಧಿ ಸೇವೆಗೆ 3 ಅಂಕಗಳು)<br>(ಶೈಕ್ಷಣಿಕ ವರ್ಷದಲ್ಲಿ 1 ಸೆಮಿಸ್ಟರ್‌ನಲ್ಲಿ ಮಾತ್ರ ಸೇವೆ ಸಲ್ಲಿಸಿದ್ದರೆ 1.5 ಅಂಕಗಳು) | **15 ಅಂಕಗಳು** |
| | **ಒಟ್ಟು** | **100 ಅಂಕಗಳು** |

5. ಅಭ್ಯರ್ಥಿಗಳು ದಿ:11.07.2009 ರ ಒಳಗೆ **ಎಂ.ಫಿಲ್** ಪದವಿಯನ್ನು ಪಡೆದಿದ್ದಲ್ಲಿ ಮಾತ್ರ ಅದನ್ನು ಪರಿಗಣಿಸುವುದು.

6. ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ, ದಿನಾಂಕ:31.05.2017ರ ಯುಜಿಸಿ ಪ್ರಕಟಣೆ ಸಂಖ್ಯೆ:ಎಫ್ ನಂ.4-1/2016(ಡಿಇಬಿ/111)ರಲ್ಲಿ ತಿಳಿಸಿರುವಂತೆ ಪಿಹೆಚ್.ಡಿ ಪದವಿಯ ಬಗ್ಗೆ ಪರಿಶೀಲಿಸತಕ್ಕದ್ದು.

7. **ಒಂದು ವೇಳೆ ಅತಿಥಿ ಉಪನ್ಯಾಸಕರು ಪಡೆದಿರುವ ವಿದ್ಯಾರ್ಹತೆಯ ಪ್ರಮಾಣ ಪತ್ರಗಳು ನಕಲು ಎಂದು ಕಂಡುಬಂದಲ್ಲಿ ಅಂತಹವರ ವಿರುದ್ಧ ಸಂಬಂಧಪಟ್ಟ ಪ್ರಾಂಶುಪಾಲರು ಕ್ರಿಮಿನಲ್ ಕೇಸ್ ದಾಖಲಿಸುವಂತೆ ಸೂಚಿಸಲಾಗಿದೆ ಹಾಗೂ ಅತಿಥಿ ಉಪನ್ಯಾಸಕರ ಶೈಕ್ಷಣಿಕ ದಾಖಲೆಗಳು ನಕಲಿ ಎಂದು ಕಂಡಬಂದಲ್ಲಿ ಅವರ ವಿರುದ್ಧ ಶಿಸ್ತು ಕ್ರಮಕೈಗೊಳ್ಳಬಹುದೆಂದು ಅವರಿಂದ ರೂ.50/-ಗಳ ಛಾಪಾ ಕಾಗದದ ಮೇಲೆ ಮುಚ್ಚಳಿಕೆ ಬರೆಸಿಕೊಳ್ಳುವುದು.**

8. ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ, **ವಿಕಲಚೇತನ ಅಭ್ಯರ್ಥಿಗಳನ್ನು** ಮಾನವೀಯತೆ ದೃಷ್ಠಿಯಿಂದ ಆದ್ಯತೆ ಮೇರೆಗೆ ಪರಿಗಣಿಸುವುದು.

9. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು ಸಂಬಂಧಪಟ್ಟ ವಿಷಯ ಹಾಗೂ ಸರ್ಕಾರ ಅಧಿಸೂಚಿಸಿರುವ ಸಮಾನಾಂತರ ವಿಷಯಗಳನ್ನು ಮಾತ್ರ ಪರಿಗಣಿಸಿ, ಅತಿಥಿ ಉಪನ್ಯಾಸಕರ ಆಯ್ಕೆಯನ್ನು ಮಾಡುವುದು.

10. ಅತಿಥಿ ಉಪನ್ಯಾಸಕರುಗಳಿಗೆ ನಿಗಧಿಪಡಿಸಿರುವ ಬೋಧನಾ ಕಾರ್ಯಭಾರದ ವಿವರ ಮತ್ತು ಅದನ್ನು ನಿರ್ವಹಿಸಿರುವ ಬಗ್ಗೆ (ವೇಳಾ ಪಟ್ಟಿಯೊಂದಿಗೆ) ಸಂಬಂಧ ಪಟ್ಟ ವಿಭಾಗದ ಮುಖ್ಯಸ್ಥರು, ಪ್ರತಿ ತಿಂಗಳು ಪ್ರಾಂಶುಪಾಲರಿಗೆ ನೀಡತಕ್ಕದ್ದು. ವಿಭಾಗದಲ್ಲಿ/ವಿಷಯದಲ್ಲಿ ಖಾಯಂ ಉಪನ್ಯಾಸಕರು ಇಲ್ಲದಿದ್ದಲ್ಲಿ ಪ್ರಾಂಶುಪಾಲರೇ ವರದಿಯನ್ನು ಸಿದ್ದಪಡಿಸುವುದು. ಸದರಿ ವರದಿ ಹಾಗೂ ಹಾಜರಾತಿಯನ್ನು ಪ್ರಾಂಶುಪಾಲರು ದೃಢಿಕರಿಸಿ ಪ್ರತಿ ತಿಂಗಳು ಅತಿಥಿ ಉಪನ್ಯಾಸಕರ ಅನುಮೋದನಾ ಪ್ರಾಧಿಕಾರವಾದ ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

11. ಪೂರ್ಣಕಾಲಿಕ ಉಪನ್ಯಾಸಕರಿಗೆ ಹಂಚಿಕೆ ಮಾಡಿ ನಂತರ ಉಳಿಯುವ ಕಾರ್ಯಭಾರವನ್ನು ನಿರ್ವಹಿಸಲು ಅತಿಥಿ ಉಪನ್ಯಾಸಕರನ್ನು ತಾತ್ಕಲಿಕ ವ್ಯವಸ್ಥೆಯಡಿ ಆಯ್ಕೆ ಮಾಡಿಕೊಳ್ಳುವುದರಿಂದ ಸದರಿ ಸೇವೆಯನ್ನು ಖಾಯಂ ಉಪನ್ಯಾಸಕರ ಹುದ್ದೆಯ ನೇಮಕಾತಿಯಲ್ಲಿ ಆದ್ಯತೆ ನೀಡಲು ಪರಿಗಣಿಸಲಾಗುವುದಿಲ್ಲ ಹಾಗೂ ಈ ಬಗ್ಗೆ ಕೃಪಾಂಕ ಕೋರಲು ಯಾವುದೇ ಹಕ್ಕು ಇರುವುದಿಲ್ಲವೆಂದು ಸೂಚಿಸಿದೆ.

12. ಅತಿಥಿ ಉಪನ್ಯಾಸಕರನ್ನು ಆಯಾ ವಿಶ್ವವಿದ್ಯಾಲಯಗಳ ಕ್ಯಾಲೆಂಡರ್ ಆಫ್ ಇವೆಂಟ್ಸ್ ಪ್ರಕಾರ ಕಾಲೇಜುಗಳಲ್ಲಿ ತರಗತಿಗಳು ಪ್ರಾರಂಭವಾದ ನಂತರ ಅತಿಥಿ ಉಪನ್ಯಾಸಕರುಗಳನ್ನು ಆಯ್ಕೆ ಮಾಡಿಕೊಂಡು, ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಅನ್ವಯಿಸುವಂತೆ ವರ್ಷಕ್ಕೆ ಗರಿಷ್ಠ 10 ತಿಂಗಳ ಅವಧಿಗೆ ಮಾತ್ರ ಆಯ್ಕೆ ಮಾಡಿಕೊಳ್ಳಲು ಸೂಚಿಸಲಾಗಿದೆ.

13. ಅತಿಥಿ ಉಪನ್ಯಾಸಕರುಗಳು ತಾತ್ಕಲಿಕ ವ್ಯವಸ್ಥೆಯಡಿ ಆಯ್ಕೆಗೊಂಡು ಕರ್ತವ್ಯ ನಿರ್ವಹಿಸುತ್ತಿದ್ದು, ಅವರುಗಳಿಗೆ ಗೌರವಧನವನ್ನು ಹೊರತುಪಡಿಸಿ ಪೂರ್ಣಕಾಲಿಕ ಸಿಬ್ಬಂದಿಗಳಿಗೆ ಇರುವಂತೆ ಯಾವುದೇ ರಜೆ (ಪ್ರಸೂತಿ ರಜೆಯನೊಳಗೊಂಡಂತೆ) ಅಥವಾ ಇತರ ಸೌಲಭ್ಯಗಳನ್ನು ನೀಡುವಂತಿಲ್ಲ.

14. ಹೊಸ ನೇಮಕಾತಿ/ವರ್ಗಾವಣೆ/ನಿಯೋಜನೆ ಹಾಗೂ ಇನ್ನಿತರ ಕಾರಣಗಳಿಂದಾಗಿ ಖಾಯಂ ಉಪನ್ಯಾಸಕರು ಕಾಲೇಜಿನಲ್ಲಿ ಕರ್ತವ್ಯಕ್ಕೆ ಹಾಜರಾದಾಗ ಉಂಟಾಗುವ ಕೊರತೆ ಕಾರ್ಯಭಾರಕ್ಕೆ ಪ್ರತಿಭಾ ಪಟ್ಟಿಯಲ್ಲಿ (Merit List) ಕಿರಿಯರಾದ ಅತಿಥಿ ಉಪನ್ಯಾಸಕರನ್ನು ಸೇವೆಯಿಂದ ತೆಗೆಯತಕ್ಕದ್ದು.

15. ಮಹಿಳಾ ಅತಿಥಿ ಉಪನ್ಯಾಸಕರು ಪ್ರಸೂತಿ ಸಂದರ್ಭದಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯಕ್ಕೆ ಗೈರು ಹಾಜರಾದ ಸಂದರ್ಭದಲ್ಲಿ ಅವರ ಕಾರ್ಯವನ್ನು ನಿರ್ವಹಿಸಲು ಬೇರೊಬ್ಬ ಅತಿಥಿ ಉಪನ್ಯಾಸಕರನ್ನು ತಾತ್ಕಾಲಿಕಬಾಗಿ ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಮಹಿಳಾ ಅತಿಥಿ ಉಪನ್ಯಾಸಕರು ಪ್ರಸೂತಿಯಿಂದ ಹಿಂದಿರುಗಿದಲ್ಲಿ ಅವರ ಸ್ಥಾನದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರನ್ನು ಸೇವೆಯಿಂದ ಬಿಡುಗಡೆಗೊಳಿಸಿ, ಪುನಃ ಅದೇ ಮಹಿಳಾ ಅಭ್ಯರ್ಥಿಯನ್ನೇ ಮುಂದುವರೆಸಿ ಅವರ ಸೇವೆಯನ್ನು ಅದೇ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಬಳಸಿಕೊಳ್ಳತಕ್ಕದ್ದು.

16. ಶೈಕ್ಷಣಿಕ ವರ್ಷದ ಮಧ್ಯೆ ಭಾಗದಲ್ಲಿ ವರ್ಗಾವಣೆ/ನಿಯೋಜನೆ/ವಯೋನಿವೃತ್ತಿ/ಸ್ವಯಂ ನಿವೃತ್ತಿ/ಹೊಸ ನೇಮಕ/ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳೇ ವಿವಿಧ ಕಾರಣಗಳಿಂದ ಕರ್ತವ್ಯದಿಂದ ನಿರ್ಗಮಿಸಿದ್ದಲ್ಲಿ, ಹೆಚ್ಚುವರಿ ಕಾರ್ಯಭಾರ ನಿರ್ವಹಿಸಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿರುವವರನ್ನೇ ಅತಿಥಿ ಉಪನ್ಯಾಸಕರಾಗಿ ಆಯ್ಕೆ ಮಾಡಿಕೊಳ್ಳತಕ್ಕದ್ದು. ಒಂದು ವೇಳೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿರುವ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಅಭ್ಯರ್ಥಿಗಳ ವಿವರಗಳೊಂದಿಗೆ ಸೂಕ್ತ ಕಾರಣ ಮತ್ತು ದಾಖಲೆಗಳ ಪ್ರಸ್ತಾವನೆಯನ್ನು ಕೇಂದ್ರ ಕಛೇರಿಗೆ ಸಲ್ಲಿಸಿ, ಪ್ರತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಅನುಮೋದನೆ ಪಡೆದು ಅರ್ಹ ಅತಿಥಿ ಉಪನ್ಯಾಸಕರ ಸೇವೆಯನ್ನು ಬಳಸಿಕೊಳ್ಳಬಹುದಾಗಿದೆ.

ಕಾಲೇಜು ಶಿಕ್ಷಣ ಆಯುಕ್ತರು

<u>ಇವರಿಗೆ,</u>

1) ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2) ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3) ಮಾಹಿತಿ & ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು–ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಮತ್ತು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.

<u>ಪ್ರತಿಯನ್ನು;</u>

1) ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ (ಉನ್ನತ) ಇಲಾಖೆ, ಬೆಂಗಳೂರು.
3) ಜಂಟಿ ನಿರ್ದೇಶಕರು (ಶೈಕ್ಷಣಿಕ), ಮ್ಯಾನೇಜರ್, ವರ್ಗಾವಣೆ & ನಿಯೋಜನೆ ವಿಭಾಗ ಹಾಗೂ ಸಂಬಂಧಪಟ್ಟ ವಿಭಾಗಗಳ ಮ್ಯಾನೇಜರ್/ಅಧೀಕ್ಷಕರುಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು.
4) ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳ ಆಪ್ತ ಶಾಖೆಗೆ.
5) ಕಛೇರಿ ಪ್ರತಿ
6) ಹೆಚ್ಚುವರಿ ಪ್ರತಿ

सत्यमेव जयते

विश्वविद्यालय अनुदान आयोग

**University Grants Commission**

(मानव संसाधन विकास मंत्रालय, भारत सरकार)
(Ministry of Human Resource Development, Govt. of India)
बहादुरशाह ज़फ़र मार्ग, नई दिल्ली-110002
Bahadur Shah Zafar Marg, New Delhi-110002
Ph.: 011-23239337, 23236788
Fax: 011 23238858, email: [illegible]

F.No. 4-1/2016 (DEB-III)

31st May, 2017

## PUBLIC NOTICE

As per UGC (Minimum standards and procedure for awards of M.Phil./Ph.D. Degree) Regulations, 2016, no University/Institution is allowed to offer M.Phil. and Ph.D. programme through distance learning mode.

Students are advised not to take admission in any M.Phil./Ph.D. programme, if offered by any University/Institution through distance learning mode.

It is informed that UGC has allowed Indira Gandhi National Open University (IGNOU), and some other State Open Universities to conduct M.Phil./Ph.D. programmes **in non-technical programmes in 'Regular (full-time/part-time) mode'** only provided these universities abide by the UGC (Minimum Standards and Procedure for Award of M.Phil./Ph.D. Degrees) Regulations, 2016 and have specific approval of the UGC.

**Prof. (Dr.) Jaspal Singh Sandhu**
*Secretary*

ಕರ್ನಾಟಕ ಸರ್ಕಾರ

ಸಂಖ್ಯೆ : ಇಡಿ 170 ಡಿಸಿಇ 2016

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು ದಿನಾಂಕ : 28-07-2016.

69

## ಅಧಿಸೂಚನೆ

ಕಾಲೇಜು ಶಿಕ್ಷಣ ಇಲಾಖೆಯ ಪದವಿ ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನಡೆಸಲಾಗುವ ಆಯ್ಕೆ / ನೇಮಕಾತಿ ಪ್ರಕ್ರಿಯೆಯಲ್ಲಿ ಯು.ಜಿ.ಸಿ. ನಿಯಮಗಳಂತೆ ನಿಗಧಿಪಡಿಸಲಾದ ವಿದ್ಯಾರ್ಹತೆ ಸಂಬಂಧಿಸಿದಂತೆ M.Sc. in Textile and Clothing (Home Science) and Fashion Technology courses ವಿಷಯಗಳನ್ನು ಸಮಾನಾಂತರ ವಿಷಯಗಳೆಂದು ಘೋಷಿಸುವ ಮತ್ತು ವಿದ್ಯಾರ್ಹತೆಯನ್ನು ನಿಗಧಿಪಡಿಸುವ ಬಗ್ಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಅಭಿಪ್ರಾಯದಂತೆ ಸಾಮಾನ್ಯ ನೇಮಕಾತಿ ನಿಯಮಗಳು 1977ರ ನಿಯಮ 2(ಹೆಚ್)ರಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಈ ಕೆಳಕಂಡ ಕಲಂ 2ರಲ್ಲಿ ತಿಳಿಸಿರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ವಿಷಯಗಳಿಗೆ ಕಲಂ 3ರಲ್ಲಿ ತಿಳಿಸಿರುವ ವಿಷಯದಲ್ಲಿ ಹೊಂದಿರುವ ವಿದ್ಯಾರ್ಹತೆಗೆ ಕಲಂ 4ರಲ್ಲಿ ತಿಳಿಸಿರುವ ವಿಷಯಗಳ ವಿದ್ಯಾರ್ಹತೆಯು ತತ್ಸಮಾನವೆಂದು ಹಾಗೂ ಸಂಬಂಧಪಟ್ಟ ವಿಷಯಗಳಿಗೆ ಬೋಧನೆ ಮಾಡಲು ಅಭ್ಯರ್ಥಿಗಳನ್ನು ಆಯ್ಕೆ ಪ್ರಕಿಯೆಗೆ ಪರಿಗಣಿಸಲು ಅರ್ಹರಾಗಿರುತ್ತಾರೆ.

| ಕ್ರ. ಸಂ. | ಸಹಾಯಕ ಪ್ರಾಧ್ಯಾಪಕರುಗಳ ಹುದ್ದೆಗಳ ವಿಷಯವಾರು ವಿವರ | ನಿಗಧಿಪಡಿಸಲಾಗಿರುವ ವಿದ್ಯಾರ್ಹತೆ (ಸ್ನಾತಕೋತ್ತರ ಪದವಿ ಮತ್ತು ಹೆಚ್ಚುವರಿ ವಿದ್ಯಾರ್ಹತೆ ಎನ್.ಇ.ಟಿ./ ಎಸ್.ಎಲ್.ಇ.ಟಿ./ಪಿ.ಹೆಚ್.ಡಿ.) | ತತ್ಸಮಾನ ವಿಷಯಗಳೆಂದು ಪರಿಗಣಿಸಿರುವ ವಿದ್ಯಾರ್ಹತೆ ಹಾಗೂ ಬೋಧನೆ ಮಾಡಲು ಅರ್ಹರಿರುವ ವಿಷಯಗಳು (ಸ್ನಾತಕೋತ್ತರ ಪದವಿ ಮತ್ತು ಹೆಚ್ಚುವರಿ ವಿದ್ಯಾರ್ಹತೆ ಎನ್.ಇ.ಟಿ./ ಎಸ್.ಎಲ್.ಇ.ಟಿ./ಪಿ.ಹೆಚ್.ಡಿ.) |
|---|---|---|---|
| 1 | 2 | 3 | 4 |
| 1 | Fashion Technology | Fashion Technology | M.Sc. in Textile and Clothing / M.Sc. Fashion and Apparel Design / M.Sc. Apparel Technology and Management offered by Bangalore University or any other regular university of Karnataka are equivalent to M.Sc. Fashion Technology. |

ಕಾಲೇಜು ಶಿಕ್ಷಣ ಆಯುಕ್ತರ
ಟಪ್ಪಾಲು ಶಾಖೆ
ಸಂಖ್ಯೆ 1245
ದಿನಾಂಕ 29 JUL 2016

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ಶಿವಲಿಂಗಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ).

ಗೆ:

1. ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು (ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ ಶಿಕ್ಷಣ ಇಲಾಖೆಯ ಕಾಲೇಜು ಶಿಕ್ಷಣ ಶಾಖೆಗೆ 100 ಪ್ರತಿಗಳನ್ನು ಒದಗಿಸುವಂತೆ ಕೋರಿದೆ).

..2..

384

2) ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು.
3) ಕಾರ್ಯನಿರ್ವಹಣಾಧಿಕಾರಿಗಳು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು
4) ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
5) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು.
6) ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
7) ಮುಖ್ಯ ಆಡಳಿತಾಧಿಕಾರಿಗಳು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
8) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

383

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 246 ಡಿಸಿಇ 2011

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 16-05-2014.

## ಅಧಿಸೂಚನೆ

ಕಾಲೇಜು ಶಿಕ್ಷಣ ಇಲಾಖೆಯ ಪದವಿ ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನಡೆಸಲಾಗುವ ಆಯ್ಕೆ/ನೇಮಕಾತಿ ಪ್ರಕ್ರಿಯೆಯಲ್ಲಿ ಯು.ಜಿ.ಸಿ ನಿಯಮಗಳಂತೆ ನಿಗದಿಪಡಿಸಲಾದ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಕೆಲವು ವಿಷಯಗಳನ್ನು ಸಮಾನಾಂತರ ವಿಷಯಗಳೆಂದು ಘೋಷಿಸುವ ಮತ್ತು ವಿದ್ಯಾರ್ಹತೆಯನ್ನು ನಿಗದಿಪಡಿಸುವ ಬಗ್ಗೆ ಕಾಲೇಜು ಶಿಕ್ಷಣ ಇಲಾಖೆಯ ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಅಭಿಪ್ರಾಯದಂತೆ ಸಾಮಾನ್ಯ ನೇಮಕಾತಿ ನಿಯಮಗಳು 1977 ರ ನಿಯಮ 2(ಹೆಚ್) ರಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಈ ಕೆಳಕಂಡ ಕಲಂ 2 ರಲ್ಲಿ ತಿಳಿಸಿರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ವಿಷಯಗಳಿಗೆ ಕಲಂ 3 ರಲ್ಲಿ ತಿಳಿಸಿರುವ ವಿಷಯದಲ್ಲಿ ಹೊಂದಿರುವ ವಿದ್ಯಾರ್ಹತೆಗೆ ಕಲಂ 4 ರಲ್ಲಿ ತಿಳಿಸಿರುವ ವಿಷಯಗಳ ವಿದ್ಯಾರ್ಹತೆಯು ಸಮಾನಾಂತರವೆಂದು ಹಾಗೂ ಸಂಬಂಧಪಟ್ಟ ವಿಷಯಗಳಿಗೆ ಬೋಧನೆ ಮಾಡಲು ಅಭ್ಯರ್ಥಿಗಳನ್ನು ಆಯ್ಕೆ ಪ್ರಕ್ರಿಯೆಗೆ ಪರಿಗಣಿಸಲು ಅರ್ಹರಾಗಿರುತ್ತಾರೆ.

| ಕ್ರ. ಸಂ. | ಸಹಾಯಕ ಪ್ರಾಧ್ಯಾಪಕರುಗಳ ಹುದ್ದೆಗಳ ವಿಷಯವಾರು ವಿವರ | ನಿಗಧಿಪಡಿಸಲಾಗಿರುವ ವಿದ್ಯಾರ್ಹತೆ (ಸ್ನಾತಕೋತ್ತರ ಪದವಿ ಮತ್ತು ಹೆಚ್ಚುವರಿ ವಿದ್ಯಾರ್ಹತೆ ಎನ್.ಇ.ಟಿ/ ಎಸ್.ಎಲ್.ಇ.ಟಿ/ಪಿ.ಹೆಚ್.ಡಿ) | ಸಮಾನಾಂತರ ವಿಷಯಗಳೆಂದು ಪರಿಗಣಿಸಿರುವ ವಿದ್ಯಾರ್ಹತೆ ಹಾಗೂ ಬೋಧನೆ ಮಾಡಲು ಅರ್ಹರಿರುವ ವಿಷಯಗಳು (ಸ್ನಾತಕೋತ್ತರ ಪದವಿ ಮತ್ತು ಹೆಚ್ಚುವರಿ ವಿದ್ಯಾರ್ಹತೆ ಎನ್.ಇ.ಟಿ/ಎಸ್.ಎಲ್.ಇ.ಟಿ/ಪಿ.ಹೆಚ್.ಡಿ) |
|---|---|---|---|
| 1 | 2 | 3 | 4 |
| 1. | ಇತಿಹಾಸ | ಇತಿಹಾಸ | ಎಂ.ಎ ಇತಿಹಾಸ, ಎಂ.ಎ ಪ್ರಾಚೀನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ, ಎಂ.ಎ ಪ್ರಾಚೀನ ಭಾರತ ಇತಿಹಾಸ ಮತ್ತು ಶಿಲಾಶಾಸನಶಾಸ್ತ್ರ M.A. Ancient History and Archaeology / M.A. Ancient Indian History and Epigraphy |
| 2 | ಫೋರೆನ್ಸಿಕ್ ಸೈನ್ಸ್ (Forensic Science) | ಫೋರೆನ್ಸಿಕ್ ಸೈನ್ಸ್ (Forensic Science) | ಫೋರೆನ್ಸಿಕ್ ಸೈನ್ಸ್ ಮತ್ತು ಅಪರಾಧಶಾಸ್ತ್ರ ಸ್ನಾತಕೋತ್ತರ ಪದವಿಗಳು ಸಮಾನಾಂತರ ಹಾಗೂ ಫೋರೆನ್ಸಿಕ್ ಸೈನ್ಸ್ (Forensic Science) ವಿಷಯ ಬೋಧಿಸಲು ಅರ್ಹರು |
| 3 | ಗಣಕವಿಜ್ಞಾನ | ಗಣಕವಿಜ್ಞಾನ | ಎಂ.ಎಸ್ಸಿ. ಕಂಪ್ಯೂಟರ್ ಸೈನ್ಸ್ / ಎಂ.ಎಸ್ಸಿ. ಕಂಪ್ಯೂಟರ್ ಸಾಫ್ಟ್‌ವೇರ್ / ಎಂ.ಎಸ್ಸಿ. ಇನ್‌ಫರ್ಮೇಷನ್ ಸೈನ್ಸ್ / ಎಂ.ಎಸ್ಸಿ. ಇನ್‌ಫರ್ಮೇಷನ್ ಸಿಸ್ಟಮ್ / ಎಂ.ಎಸ್ಸಿ. ಇನ್‌ಫರ್ಮೇಷನ್ ಟೆಕ್ನಾಲಜಿ, ಎಂ.ಎಸ್ಸಿ. ಸಾಫ್ಟ್‌ವೇರ್ ಟೆಕ್ನಾಲಜಿ / ಎಂ.ಸಿ.ಎ. (ಮಾಸ್ಟರ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್ಸ್), ಎಂ.ಎಸ್. (ಇನ್‌ಫರ್ಮೇಷನ್ ಸೈನ್ಸ್), ಎಂ.ಟೆಕ್. (ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್), ಸ್ನಾತಕೋತ್ತರ ಕೋರ್ಸುಗಳು ಎಂ.ಎಸ್ಸಿ. (ಕಂಪ್ಯೂಟರ್ ಸೈನ್ಸ್) ಕೋರ್ಸಿಗೆ ಸಮಾನಾಂತರ ಹಾಗೂ ಕಂಪ್ಯೂಟರ್ ಸೈನ್ಸ್ ವಿಷಯ ಬೋಧಿಸಲು ಅರ್ಹರು. |

20/5/2014

ಕಾಲೇಜು ಶಿಕ್ಷಣ ಇಲಾಖೆಯ ಪದವಿ ಕಾಲೇಜುಗಳಲ್ಲಿ ವಾಣಿಜ್ಯಶಾಸ್ತ್ರ, ನಿರ್ವಹಣಾಶಾಸ್ತ್ರ ಹಾಗೂ ಫೈನಾನ್ಸ್ ಅಂಡ್ ಅಕೌಂಟಿಂಗ್/ಫೈನಾನ್ಷಿಯಲ್ ಮ್ಯಾನೇಜ್‌ಮೆಂಟ್ ವಿಷಯಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನಡೆಸಲಾಗುವ ಆಯ್ಕೆ/ನೇಮಕಾತಿ ಪ್ರಕ್ರಿಯೆಯಲ್ಲಿ ಈ ಕೆಳಕಂಡಂತೆ ವಿದ್ಯಾರ್ಹತೆಯನ್ನು ನಿಗಧಿಪಡಿಸಿ ಸದರಿ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳನ್ನು ಆಯ್ಕೆ ಪ್ರಕ್ರಿಯೆಗೆ ಪರಿಗಣಿಸಲು ಅರ್ಹರಾಗಿರುತ್ತಾರೆ.

| ಕ್ರ.ಸಂ. | ಸಹಾಯಕ ಪ್ರಾಧ್ಯಾಪಕರುಗಳ ಹುದ್ದೆಗಳ ವಿಷಯವಾರು ವಿವರ | ನಿಗಧಿಪಡಿಸಿರುವ ವಿದ್ಯಾರ್ಹತೆ ಹಾಗೂ ಬೋಧನೆ ಮಾಡಲು ಅರ್ಹರಿರುವ ವಿಷಯಗಳು (ಸ್ನಾತಕೋತ್ತರ ಪದವಿ ಮತ್ತು ಹೆಚ್ಚುವರಿ ವಿದ್ಯಾರ್ಹತೆ ಎನ್.ಇ.ಟಿ/ಎಸ್.ಎಲ್.ಇ.ಟಿ/ಪಿ.ಹೆಚ್.ಡಿ) |
|---|---|---|
| 1 | 2 | 3 |
| 1 | ವಾಣಿಜ್ಯಶಾಸ್ತ್ರ | ಬಿ.ಕಾಂ ಪದವಿಯೊಂದಿಗೆ ಎಂ.ಕಾಂ ಸ್ನಾತಕೋತ್ತರ ಪದವಿ ಪಡೆದವರು ಮಾತ್ರ ವಾಣಿಜ್ಯಶಾಸ್ತ್ರ ಬೋಧಿಸಲು ಅರ್ಹರು. |
| 2 | ನಿರ್ವಹಣಾಶಾಸ್ತ್ರ (Management ) | ಬಿ.ಬಿ.ಎಂ/ಬಿ.ಬಿ.ಎ ಮತ್ತು ಬಿ.ಕಾಂ ಪದವಿಯೊಂದಿಗೆ ಎಂ.ಬಿ.ಎ ಸ್ನಾತಕೋತ್ತರ ಪದವಿ ಪಡೆದವರು ಮಾತ್ರ ನಿರ್ವಹಣಾಶಾಸ್ತ್ರ (ಬಿ.ಬಿ.ಎ/ಬಿ.ಬಿ.ಎಂ/ಎಂ.ಬಿ.ಎ) ವಿಷಯಗಳನ್ನು ಬೋಧಿಸಲು ಅರ್ಹರು |
| 3 | ಫೈನಾನ್ಸ್ ಅಂಡ್ ಅಕೌಂಟಿಂಗ್ / ಫೈನಾನ್ಷಿಯಲ್ ಮ್ಯಾನೇಜ್‌ಮೆಂಟ್ (MFA/MFM) | ಬಿ.ಬಿ.ಎಂ/ಬಿ.ಬಿ.ಎ/ಬಿ.ಕಾಂ ಪದವಿಯೊಂದಿಗೆ ಎಂ.ಎಫ್.ಎ/ಎಂ.ಎಫ್.ಎಂ ಸ್ನಾತಕೋತ್ತರ ಪದವಿ ಪಡೆಧವರು ಮಾತ್ರ ಫೈನಾನ್ಸ್ ಅಂಡ್ ಅಕೌಂಟಿಂಗ್ / ಫೈನಾನ್ಷಿಯಲ್ ಮ್ಯಾನೇಜ್‌ಮೆಂಟ್ ಕೋರ್ಸುಗಳನ್ನು ಬೋಧಿಸಲು ಅರ್ಹರು |

ಮೇಲ್ಕಂಡ ವಿಷಯಗಳನ್ನು (Subjects) ಹೊರತುಪಡಿಸಿ ಇತರೆ ವಿಷಯಗಳ ಸಹಾಯಕ ಪ್ರಾಧ್ಯಾಪಕರುಗಳ ನೇಮಕಾತಿ ವಿಷಯಗಳ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಆಯಾ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಹಾಗೂ ಎನ್.ಇ.ಟಿ/ಎಸ್.ಎಲ್.ಇ.ಟಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಬೇಕು ಅಥವಾ ವರ್ಕ್ ಕೋರ್ಸ್‌ಯೊಂದಿಗೆ ಪಿ.ಹೆಚ್.ಡಿ ಪದವಿಯನ್ನು ಪಡೆದವರು ಸಂಬಂಧಪಟ್ಟ ಆಯಾ ವಿಷಯಗಳಲ್ಲಿ ಮಾತ್ರ ಬೋಧನೆ ಮಾಡಲು ಅರ್ಹರಾಗಿರುತ್ತಾರೆ ಮತ್ತು ಸಂಬಂಧಪಟ್ಟ ವಿಷಯಗಳಲ್ಲಿಯೇ ಎನ್.ಇ.ಟಿ/ಎಸ್.ಎಲ್.ಇ.ಟಿ/ಪಿ.ಹೆಚ್.ಡಿ ಪದವಿ/ಪರೀಕ್ಷೆಗಳಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಿರಬೇಕಾಗಿರುತ್ತದೆ.

---

ಸಂಖ್ಯೆ: ಕಾಶಿಇ/82/ವೃ&ನೇನಿ/2013-14/ನೇ.ವಿ-1.

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು-1. ದಿನಾಂಕ:04-06-2014.

ಮೇಲ್ಕಂಡ ಸರ್ಕಾರದ ಅಧಿಸೂಚನೆಯನ್ನು ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ರವಾನಿಸಲಾಗಿದೆ.

ಇವರಿಗೆ,

1) ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ
2) ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

<u>ಪ್ರತಿಯನ್ನು:</u>

1) ಎಲ್ಲಾ ಅಧಿಕಾರಿಗಳ ಆಪ್ತ ಶಾಖೆಗಳಿಗೆ.
2) ಎಲ್ಲಾ ವಿಭಾಗದ ಮ್ಯಾನೇಜರ್/ಅಧೀಕ್ಷಕರುಗಳಿಗೆ.
3) ಹೆಚ್ಚುವರಿ ಪ್ರತಿ.
4) ಕಛೇರಿ ಪ್ರತಿ.

ಕಾಲೇಜು ಶಿಕ್ಷಣ ನಿರ್ದೇಶಕರು.

11/6/14

ರವಾನಿಸಲಾಗಿದೆ

(386)

ಕರ್ನಾಟಕ ಸರ್ಕಾರ

ಸಂಖ್ಯೆ:ಇಡಿ 246 ಡಿಸಿಇ 2011

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:12-02-2015.

ಕಾಲೇಜು ಶಿಕ್ಷಣ ಆಯುಕ್ತರ
ಆವಕ ಶಾಖೆ
ಸಂಖ್ಯೆ 2211
ದಿನಾಂಕ 13 FEB 2015

## ಅಧಿಸೂಚನೆ

## ಭಾಗ-1

ಕಾಲೇಜು ಶಿಕ್ಷಣ ಇಲಾಖೆಯ ಪದವಿ ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನಡೆಸಲಾಗುವ ಆಯ್ಕೆ/ನೇಮಕಾತಿ ಪ್ರಕ್ರಿಯೆಯಲ್ಲಿ ಯು.ಜಿ.ಸಿ ನಿಯಮಗಳಂತೆ ನಿಗಧಿಪಡಿಸಲಾದ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಕೆಲವು ವಿಷಯಗಳನ್ನು ಸಮಾನಾಂತರ ವಿಷಯಗಳೆಂದು ಘೋಷಿಸುವ ಮತ್ತು ವಿದ್ಯಾರ್ಹತೆಯನ್ನು ನಿಗಧಿಪಡಿಸುವ ಬಗ್ಗೆ ಕಾಲೇಜು ಶಿಕ್ಷಣ ಇಲಾಖೆಯ ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಅಭಿಪ್ರಾಯದಂತೆ ಸಾಮಾನ್ಯ ನೇಮಕಾತಿ ನಿಯಮಗಳು 1977 ರ ನಿಯಮ 2(ಹೆಚ್) ರಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಈ ಕೆಳಕಂಡ ಕಲಂ 2 ರಲ್ಲಿ ತಿಳಿಸಿರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ವಿಷಯಗಳಿಗೆ ಕಲಂ 3 ರಲ್ಲಿ ತಿಳಿಸಿರುವ ವಿಷಯದಲ್ಲಿ ಹೊಂದಿರುವ ವಿದ್ಯಾರ್ಹತೆಗೆ ಕಲಂ 4 ರಲ್ಲಿ ತಿಳಿಸಿರುವ ವಿಷಯಗಳ ವಿದ್ಯಾರ್ಹತೆಯು ತತ್ಸಮಾನವೆಂದು ಹಾಗೂ ಸಂಬಂಧಪಟ್ಟ ವಿಷಯಗಳಿಗೆ ಬೋಧನೆ ಮಾಡಲು ಅಭ್ಯರ್ಥಿಗಳು ಆಯ್ಕೆ ಪ್ರಕ್ರಿಯೆಗೆ ಪರಿಗಣಿಸಲು ಅರ್ಹರಾಗಿರುತ್ತಾರೆ.

| ಕ್ರ. ಸಂ. | ಸಹಾಯಕ ಪ್ರಾಧ್ಯಾಪಕರುಗಳ ಹುದ್ದೆಗಳ ವಿಷಯವಾರು ವಿವರ | ನಿಗಧಿಪಡಿಸಲಾಗಿರುವ ವಿದ್ಯಾರ್ಹತೆ (ಸ್ನಾತಕೋತ್ತರ ಪದವಿ ಮತ್ತು ಹೆಚ್ಚುವರಿ ವಿದ್ಯಾರ್ಹತೆ ಎನ್.ಇ.ಟಿ/ ಎಸ್.ಎಲ್.ಇ.ಟಿ/ಪಿ.ಹೆಚ್.ಡಿ) | ತತ್ಸಮಾನ ವಿಷಯಗಳೆಂದು ಪರಿಗಣಿಸಿರುವ ವಿದ್ಯಾರ್ಹತೆ ಹಾಗೂ ಬೋಧನೆ ಮಾಡಲು ಅರ್ಹರಿರುವ ವಿಷಯಗಳು (ಸ್ನಾತಕೋತ್ತರ ಪದವಿ ಮತ್ತು ಹೆಚ್ಚುವರಿ ವಿದ್ಯಾರ್ಹತೆ ಎನ್.ಇ.ಟಿ/ಎಸ್.ಎಲ್.ಇ.ಟಿ/ಪಿ.ಹೆಚ್.ಡಿ) |
|---|---|---|---|
| 1 | 2 | 3 | 4 |
| 1 | ರಸಾಯನಶಾಸ್ತ್ರ (ಪದವಿ) | ರಸಾಯನಶಾಸ್ತ್ರ | ರಸಾಯನಶಾಸ್ತ್ರ ವಿಷಯದೊಂದಿಗೆ Analytical Chemistry, Applied Chemistry, Industrial Chemistry, In-Organic Chemistry, Organic Chemistry, Physical Chemistry and Pharmaceutical Chemistry "Provided that they have studied common general Chemistry paper (equivalent to that of M.Sc Chemistry course) in the First year or in I & II semesters of the above said courses". |
| 2 | ಗಣಕವಿಜ್ಞಾನ | ಗಣಕವಿಜ್ಞಾನ | ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 246 ಡಿಸಿಇ 2011, ದಿನಾಂಕ:16-05-2014ರ ಅಧಿಸೂಚನೆಯಲ್ಲಿ ಈಗಾಗಲೇ ಗಣಕವಿಜ್ಞಾನ ವಿಷಯಕ್ಕೆ ತತ್ಸಮಾನವೆಂದು ಪರಿಗಣಿಸಿರುವ ವಿಷಯಗಳನ್ನೊಳಗೊಂಡಂತೆ M.Tech Information Technology (are eligible to teach B.Sc Computer Science/BCA Courses) ಈ ವಿಷಯವನ್ನು ಗಣಕವಿಜ್ಞಾನ ವಿಷಯಕ್ಕೆ ತತ್ಸಮಾನವೆಂದು ಹಾಗೂ Computer Science ವಿಷಯವನ್ನು ಬೋಧಿಸಲು ಅರ್ಹರು. |

## ಭಾಗ-2

ಕಾಲೇಜು ಶಿಕ್ಷಣ ಇಲಾಖೆಯ ಪದವಿ ಕಾಲೇಜುಗಳಲ್ಲಿ ಸಾರ್ವಜನಿಕ ಆಡಳಿತ, ನಿರ್ವಹಣಾಶಾಸ್ತ್ರ ಸ್ನಾತಕೋತ್ತರ, ಟೂರಿಸಂ ಅಡ್ಮಿನಿಷ್ಟ್ರೇಷನ್ / ಬಿಸಿನೆಸ್ ಅಕೌಂಟಿಂಗ್, ಇಂಟರ್ ನ್ಯಾಶನಲ್ ಬಿಜಿನೆಸ್, ಮತ್ತು ಪರಿಸರ ವಿಜ್ಞಾನ ವಿಷಯಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನಡೆಸಲಾಗುವ ಆಯ್ಕೆ/ನೇಮಕಾತಿ

ಪ್ರಕ್ರಿಯೆಯಲ್ಲಿ ಈ ಕೆಳಕಂಡಂತೆ ವಿದ್ಯಾರ್ಹತೆಯನ್ನು ನಿಗಧಿಪಡಿಸಿ ಸದರಿ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳನ್ನು ಆಯ್ಕೆ ಪ್ರಕ್ರಿಯೆಗೆ ಪರಿಗಣಿಸಲು ಅರ್ಹರಾಗಿರುತ್ತಾರೆ.

| ಕ್ರ.ಸಂ. | ಸಹಾಯಕ ಪ್ರಾಧ್ಯಾಪಕರುಗಳ ಹುದ್ದೆಗಳ ವಿಷಯವಾರು ವಿವರ | ನಿಗಧಿಪಡಿಸಿರುವ ವಿದ್ಯಾರ್ಹತೆ ಹಾಗೂ ಬೋಧನೆ ಮಾಡಲು ಅರ್ಹರಿರುವ ವಿಷಯಗಳು (ಸ್ನಾತಕೋತ್ತರ ಪದವಿ ಮತ್ತು ಹೆಚ್ಚುವರಿ ವಿದ್ಯಾರ್ಹತೆ ಎನ್.ಇ.ಟಿ/ಎಸ್.ಎಲ್.ಇ.ಟಿ/ಪಿ.ಹೆಚ್.ಡಿ) |
|---|---|---|
| 1 | 2 | 3 |
| 1 | ಸಾರ್ವಜನಿಕ ಆಡಳಿತ | MA Public Administration And MA Political Science are eligible to teach Public Administration |
| 2 | ನಿರ್ವಹಣಾಶಾಸ್ತ್ರ (ಸ್ನಾತಕೋತ್ತರ) | MBA graduates from any stream are eligible to teach MBA Course |
| 3 | ಟೂರಿಸಂ ಅಡ್ಮಿನಿಸ್ಟ್ರೇಷನ್ / ಬಿಸಿನೆಸ್ ಅಕೌಂಟಿಂಗ್ | MTA/MBA (Tourism) Graduates only are eligible to teach tourism subjects at Under Graduation or Post-Graduation |
| 4 | ಇಂಟರ್ ನ್ಯಾಶನಲ್ ಬಿಜಿನೆಸ್. | MIB Graduates with Under-Graduation in BBA/BBM/BBS/BMS Courses |
| 5 | ಪರಿಸರ ವಿಜ್ಞಾನ (ಪದವಿ) | M.Sc Environmental Science graduates with the combinations of CBEn, CZEn,BZEn at UG courses |

## ಭಾಗ-3

ಇದೇ ಸಮಸಂಖ್ಯೆಯ ಆದೇಶ ದಿನಾಂಕ:16-05-2011 ರಂದು ಹೊರಡಿಸಿದ ಅಧಿಸೂಚನೆಯಲ್ಲಿ ನಿಗದಿಪಡಿಸಲಾದ ವಿದ್ಯಾರ್ಹತೆಯ ಕುರಿತಂತೆ ಪುನರ್ ಪರಿಶೀಲಿಸಲಾಗಿ ವಾಣಿಜ್ಯಶಾಸ್ತ್ರ ವಿಷಯಕ್ಕೆ ನಿಗದಿಪಡಿಸಲಾದ ವಿದ್ಯಾರ್ಹತೆಯನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿದೆ.

| ಕ್ರ.ಸಂ. | ಸಹಾಯಕ ಪ್ರಾಧ್ಯಾಪಕರುಗಳ ಹುದ್ದೆಗಳ ವಿಷಯವಾರು ವಿವರ | ನಿಗಧಿಪಡಿಸಿರುವ ವಿದ್ಯಾರ್ಹತೆ ಹಾಗೂ ಬೋಧನೆ ಮಾಡಲು ಅರ್ಹರಿರುವ ವಿಷಯಗಳು (ಸ್ನಾತಕೋತ್ತರ ಪದವಿ ಮತ್ತು ಹೆಚ್ಚುವರಿ ವಿದ್ಯಾರ್ಹತೆ ಎನ್.ಇ.ಟಿ/ಎಸ್.ಎಲ್.ಇ.ಟಿ/ಪಿ.ಹೆಚ್.ಡಿ) |
|---|---|---|
| 1 | 2 | 3 |
| 1 | ವಾಣಿಜ್ಯಶಾಸ್ತ್ರ | ಬಿ.ಕಾಂ /ಬಿಬಿಎಂ/ಬಿಬಿಎ ಪದವಿಯೊಂದಿಗೆ ಎಂ.ಕಾಂ ಸ್ನಾತಕೋತ್ತರ ಪದವಿ ಪಡೆದವರು ಮಾತ್ರ ವಾಣಿಜ್ಯಶಾಸ್ತ್ರ ಬೋಧಿಸಲು ಅರ್ಹರು. |
| 2 | ನಿರ್ವಹಣಾಶಾಸ್ತ್ರ (ಪದವಿ) | ಬಿ.ಬಿ.ಎಂ/ಬಿ.ಬಿ.ಎ/ಬಿ.ಕಾಂ ಪದವಿಯೊಂದಿಗೆ ಎಂ.ಬಿ.ಎ/ಎಂ.ಕಾಂ. ಸ್ನಾತಕೋತ್ತರ ಪದವಿ ಪಡೆದವರು ಮಾತ್ರ ಬಿ.ಬಿ.ಎ/ ಬಿ.ಬಿ.ಎಂ. ವಿಷಯಗಳನ್ನು ಬೋಧಿಸಲು ಅರ್ಹರು. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಶೇಖರ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ)

ಗೆ:-

1) ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು (ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ ಶಿಕ್ಷಣ ಇಲಾಖೆಯ ಕಾಲೇಜು ಶಿಕ್ಷಣ ಶಾಖೆಗೆ 200 ಪ್ರತಿಗಳನ್ನು ಒದಗಿಸುವಂತೆ ಕೋರಿದೆ.